# 5

# ಪ್ರಶ್ನೆ:

# “ಒಂದು ಸಭೆಯು ಇನ್ನೊಂದು ಸಭೆಯಷ್ಟೇ ಒಳ್ಳೆಯದಾಗಿದ್ದರೆ, ಸಭಾಪಂಗಡವಾಗಿರದೇ ಇರಲು ಯಾಕೆ ಚಿಂತಿಸುತ್ತೀ?”

## ಉತ್ತರ:

ನಮ್ಮ ಗುರಿಯು ಸಭಾಪಂಗಡವಾಗಿರದೇ ಇರುವುದು. ಆದರೆ ಯಾಕೆ ತೊಂದರೆ? ಒಂದು ಸಭೆಯು ಹೇಗೂ ಇನ್ನೊಂದು ಸಭೆಯಷ್ಟು ಒಳ್ಳೆಯದಾಗಿದ್ದರೆ, ಸಭಾಪಂಗಡ ವಾಗಿರದೇ ಇರಲು ಯಾಕೆ ಚಿಂತಿಸುವಿರಿ?

ಆ ಪ್ರಶ್ನೆಗೆ ಉತ್ತರ ಕೊಡಲು ನಾವು ಉದ್ದೇಶಿಸಿದ್ದೇವೆ, ಆದರೆ ನಮ್ಮ ಧ್ಯೇಯವನ್ನು ನಿರೂಪಿಸಿ, ಬೆಂಬಲಿಸುವದರಿಂದ ಪ್ರಾರಂಭಿಸುವ ಅಗತ್ಯತೆ ಇದೆ.

### ಸಭಾಪಂಗಡದವಲ್ಲದ ಕ್ರೈಸ್ತತ್ವದ ವಿವರಣೆ

ಮೊದಲನೆಯದಾಗಿ, ಸಭಾಪಂಗಡವಲ್ಲದ ಕ್ರೈಸ್ತತ್ವದ ಒಂದು ವಿವರಣೆಯನ್ನು ಯೋಚಿಸೋಣ. ನಾವು ಮಾತಾಡುತ್ತಿರುವ ಮಾತುಗಳನ್ನು ನಿರೂಪಿಸುವುದರಿಂದ ಪ್ರಾರಂಭಿಸೋಣ.

“ಸಭಾಪಂಗಡ” ಎಂಬ ಮಾತಿಗೆ ನಮ್ಮ ಅರ್ಥವೇನು? ಧಾರ್ಮಿಕ ಹಿನ್ನೆಲೆಯಲ್ಲಿ ಜನರು ಉಪಯೋಗಿಸುವಾಗ ಮಾಡುವ ಅರ್ಥವೇ ನಮ್ಮ ಅರ್ಥವಾಗಿದೆ. ಈ ಪದಕ್ಕಾಗಿ ನಾನು ಕಂಡುಕೊಂಡ ಅರ್ಥಗಳು ಇವುಗಳನ್ನೊಳಗೊಂಡಿವೆ: “ಒಂದು ಧಾರ್ಮಿಕ ಗುಂಪು ಇಲ್ಲವೇ ಪಂಗಡ”[1]; “ಪ್ರತ್ಯೇಕವಾಗಿ ಹೆಸರಿಸಲ್ಪಟ್ಟ ಸಭೆ ಇಲ್ಲವೇ ಪಂಗಡ”[2]; “ ‘ಡಿನಾಮಿನೆಶನ್’ ಎಂಬ ಮಾತು ಪ್ರತ್ಯೇಕವಾದ ಧಾರ್ಮಿಕ ಸಂಸ್ಥೆಗೆ”[3] ಅನ್ವಯಿಸಲ್ಪಟ್ಟಿದೆ; “ವಿಶಿಷ್ಟವಾದ ಹೆಸರಿನಡಿಯಲ್ಲಿ ಪ್ರತ್ಯೇಕವಾದ ವಿಶ್ವಾಸ ಸೂತ್ರಕ್ಕೆ ನಿಷ್ಠೆಯಿಂದಿರುವ ಒಂದು ಧಾರ್ಮಿಕ ಗುಂಪಿಗೆ ಅನ್ವಯಿಸಲ್ಪಟ್ಟಿರುತ್ತದೆ.”[4]

ಹೀಗೆ ಸಭಾಪಂಗಡವು ಒಂದು ಧಾರ್ಮಿಕ ಪಂಥವಾಗಿದೆ. *ಅದು ವಿಶಿಷ್ಟವಾದ ತತ್ವಗಳಿಂದ ಮತ್ತು ಪ್ರತ್ಯೇಕವಾದ ಹೆಸರಿನಿಂದ ಇರುವ ಪಂಗಡವಾಗಿದೆ.* ಪ್ರತಿಯೊಂದು ಸಭಾಪಂಗಡಕ್ಕೆ ಅದರ ಸ್ವಂತ ಆಚರಣೆಗಳು, ಬೋಧನೆಗಳು, ಮತ್ತು ಆರಾಧನೆ ಇರುತ್ತದೆ. ಹೆಚ್ಚಾದ ಸಭಾಪಂಗಡಗಳಿಗೆ ಅವುಗಳ ಸ್ವಂತ - ಕೇಂದ್ರಿಕೃತ ಸಂಸ್ಥೆಯಿದ್ದು,

ಅದು ಸಭಾಪಂಗಡವನ್ನು ಪ್ರತಿನಿಧೀಕರಿಸುತ್ತದೆ ಮತ್ತು ನಿಯಂತ್ರಿಸುತ್ತದೆ.

ಅದು ಇಂಡೀಯಾದದ್ದರ ಒಂದು ಭಾಗವಾಗಿ *ನಿರ್ದಿಷ್ಟವಾದ ತತ್ವಗಳೊಂದಿಗೆ ಒಂದು ಪಂಗಡವಾಗಿದೆ.* ಸಭಾಪಂಗಡಗಳ ಬರಹಗಾರರು ಪ್ರತಿಯೊಂದು ಸಭಾಪಂಗಡವು ಇಡೀ ಕ್ರೈಸ್ತತ್ವದ ಭಾಗವಾಗಿದೆಯೆಂದು ತಿಳಿದುಕೊಳ್ಳುತ್ತಾರೆ. ಮತ್ತು ಎಲ್ಲಾ ವಿವಿಧ ಸಭಾಪಂಗಡಗಳು ಕ್ರಿಸ್ತನ ಒಂದು ದೊಡ್ಡ ದೇಹವನ್ನಾಗಿ ಮಾಡುತ್ತವೆ ಎಂದು ತಿಳಿಯುತ್ತಾರೆ.

"ಸಭಾಪಂಗಡವಲ್ಲದ್ದು" ("non–denominational") ಎಂಬ ಮಾತಿನಿಂದ ನಾವು ಯಾವ ಅರ್ಥಮಾಡುತ್ತೇವೆ? ನಮ್ಮ ಧ್ಯೇಯವು ಚರಿತ್ರೆಯಲ್ಲಿ ಸಭಾಪಂಗಡಗಳಿಲ್ಲದ ಸಮಯಕ್ಕೆ ಹಿಂದೆ ಹೋಗಿ, ಅಲ್ಲಿ ನಾವು ಕಂಡುಕೊಳ್ಳುವ ಸಭೆಯನ್ನು ಪೂರ್ವಸ್ಥಿತಿಗೆ ತರುವುದು ಆಗಿದೆ. ನಮ್ಮ ಗುರಿಯು ಸಭಾಪಂಗಡಗಳಿಗಿಂತ ಪೂರ್ವದಲ್ಲಿದ್ದದ್ದು ಆಗಿರುವುದು ಎಂದು ನೀವು ಹೇಳಬಹುದು.

ಚರಿತ್ರೆಯಲ್ಲಿ ಎಂದಾದರೂ ಅಂಥ ಸಮಯವು ಇತ್ತೋ? ಹೌದು! ಹೊಸ ಒಡಂಬಡಿಕೆಯ ಸಮಯಗಳಲ್ಲಿ, ಒಂದು ದೇಹವಿತ್ತು (ಎಫೆಸ 4:4); ಆ ದೇಹವು ಸಭೆಯಾಗಿತ್ತು (ಎಫೆಸ 1:22, 23; ಹೋಲಿಸು ಮತ್ತಾಯ 16:18; 1 ಕೊರಿಂಥ 12:20). ಹೀಗೆ ಅಲ್ಲಿ ಸಭಾಪಂಗಡಗಳಿರಲಿಲ್ಲ; ಅಲ್ಲಿ ಒಂದೇ ಒಂದು ಸಭೆ, ಕ್ರಿಸ್ತನ ದೇಹ ಇತ್ತು. ಆ ಒಂದು ಸಭೆಯು ಕ್ರೈಸ್ತತ್ವದ ಪೂರ್ಣತೆಯಾಗಿತ್ತು.

ಹೊಸ ಒಡಂಬಡಿಕೆಯಲ್ಲಿ ಸಭಾಪಂಗಡಕ್ಕೆ ಅತೀ ಸಾಮೀಪ್ಯತೆಯನ್ನು ಕೊರಿಂಥದಲ್ಲಿಯ ಪರಿಸ್ಥಿತಿಯಲ್ಲಿ ಕಂಡುಕೊಳ್ಳುತ್ತೇವೆ:

> ಯಾಕಂದರೆ ನನ್ನ ಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ ಖ್ಲೋಯೆಯ ಮನೆಯವರಿಂದ ನನಗೆ ತಿಳಿದು ಬಂತು. ನಿಮ್ಮೊಳಗೆ ಪ್ರತಿಯೊಬ್ಬನು - ನಾನು ಪೌಲನವನು, ಇಲ್ಲವೆ - ನಾನು ಅಪೊಲ್ಲೋಸನವನು, ಅಥವಾ - ನಾನು ಕೇಫನವನು, ಇಲ್ಲವೆ - ನಾನು ಕ್ರಿಸ್ತನವನು ಎಂದು ಹೇಳಿಕೊಳ್ಳುತ್ತಾನಂತೆ. ಕ್ರಿಸ್ತನು ವಿಭಾಗವಾಗಿದ್ದಾನೋ? ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೋ? ನೀವು ಪೌಲನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡಿರೋ? (1 ಕೊರಿಂಥ 1:11-13).

ಇಲ್ಲಿಯೂ ಸಹ ನಾವು ಇಂದು ತಿಳಿದಿರುವಂಥ ಸಭಾಪಂಗಡಗಳಿರುವದಿಲ್ಲ; ಸಭಾಪಂಗಡದ ಬೀಜಗಳು ಮಾತ್ರವೇ ಅಲ್ಲಿದ್ದವು. ಮತ್ತು ಆ ಬೀಜಗಳು ಖಂಡಿಸಲ್ಪಟ್ಟವು! (ಹೋಲಿಸು ಗಲಾತ್ಯ 5:19-21). ಹೊಸ ಒಡಂಬಡಿಕೆಯ ಸಮಯಗಳಲ್ಲಿ ಒಂದೇ ಒಂದು ಸಭೆಯಿತ್ತು ಮತ್ತು ಆ ಸಭೆಯನ್ನು ಪಕ್ಷಗಳಾಗಿ ಇಲ್ಲವೇ ಗುಂಪುಗಳಾಗಿ ಒಡೆಯುವ ಯಾವುದೇ ಚಳವಳಿಯು ಖಂಡಿಸಲ್ಪಟ್ಟಿತು.

*ಹೀಗೆ ಹೊಸ ಒಡಂಬಡಿಕೆಯ ಸಭೆಯು ಸಭಾಪಂಗಡಗಳಿಲ್ಲದ ಸಭೆಯಾಗಿತ್ತು.* ನಮ್ಮ ಧ್ಯೇಯವು ಆ ಸಭೆಯಾಗಿರುವುದಾಗಿದೆ, ಆ ಸಭೆಯಾಗಿರುವಲ್ಲಿ ನಾವು ಸಭಾಪಂಗಡಗಳಾಗಿ ಆಗಿರದೇ ಇರುವ ಅವಶ್ಯಕತೆಯಾಗಿದೆ. ಹೊಸ ಒಡಂಬಡಿಕೆಯ ಸಭೆಯು ಸಭಾಪಂಗಡವಾಗಿರದೇ ಇದ್ದುದರಿಂದ, ನಾವು ಸಭಾಪಂಗಡಗಳ ಬಗ್ಗೆ ಮಾತಾಡುವಾಗ, ಅಪೊಸ್ತಲರು ಜೀವಿಸಿದ ನಂತರದ ಮತ್ತು ಪ್ರಥಮ ಶತಮಾನದನಂತರ ಅಸ್ತಿತ್ವಕ್ಕೆ ಬಂದ ಸಭೆಗಳ ಸಮಯಗಳಲ್ಲಿ ಉದ್ಭವಿಸಿದ ಪರಿಸ್ಥಿಯ ಬಗ್ಗೆ ಮಾತಾಡುತ್ತಿದ್ದೇವೆ.

## ಸಭಾ ಪಂಗಡವಲ್ಲದ ಕ್ರೈಸ್ತತ್ವದ ಪ್ರತಿವಾದನೆ

ಎರಡನೆಯದಾಗಿ, ಸಭಾಪಂಗಡವಲ್ಲದ ಕ್ರೈಸ್ತತ್ವದ ಪ್ರತಿವಾದನೆಯನ್ನು ಯೋಚಿಸಿರಿ. ಸಭಾಪಂಗಡವಿಲ್ಲದಿರುವದನ್ನು ನಾವು ಯಾಕೆ ಪ್ರತಿವಾದಿಸುವ ಅಗತ್ಯತೆಯಿದೆ?

ಮೊದಲನೆಯದು, ಕೆಲವು ಜನರು ಹೊಸ ಒಡಂಬಡಿಕೆಯಲ್ಲಿ ಸಭೆಯಂತೆ ಇದ್ದಂತೆ ಸಭಾಪಂಗಡವಾಗಿರದೇ ಇರುವಂಥದ್ದು *ಅಸಾಧ್ಯವಾಗಿರುವುದು* ಎಂದು ಆಕ್ಷೇಪಿಸುತ್ತಾರೆ ಯಾಕಂದರೆ ಸಭೆಯನ್ನು ಸಭಾಪಂಗಡದಿಂದ ಪುನಃಸ್ಥಾಪಿಸಲಿಕ್ಕೆ ದೇವರು ಯಾವುದೇ ಮಾದರಿಯನ್ನು ಬಿಟ್ಟಿರುವದಿಲ್ಲ.

ಯಾವದೇ ವಿಧಾನ, ಅವಧಿ ಇರುವದಿಲ್ಲ ಎಂದು ಕೆಲವರು ಹೇಳುತ್ತಾರೆ. ಬೈಬಲನ್ನು ಧರ್ಮದಲ್ಲಿ ಬದಲಾಗದ ಮಾರ್ಗದರ್ಶಿಯಂತೆ ಮತ್ತು ಹೊಸ ಒಡಂಬಡಿಕೆಯ ಸಭೆಯನ್ನು ಇಂದಿನ ಸಭೆಗೆ ಮಾದರಿಯಂತೆ ನಾವು ಉಪಯೋಗಿಸಬೇಕೆಂದು ದೇವರು ಉದ್ದೇಶಿಸುವನೆಂಬುದನ್ನು ಅವರು ನಂಬುವದಿಲ್ಲ.

ಅವರು ಸರಿಯಾಗಿರುವರೋ? ತಾನು ಅವರಿಗೆ ಬೋಧಿಸಿದ್ದನ್ನು, ಶಿಷ್ಯರು ಇತರರಿಗೆ ಬೋಧಿಸಬೇಕೆಂದು ಯೇಸು ಹೇಳಿದನಂತರ. "ಇಗೋ, ಯುಗದ ಸಮಾಪ್ತಿಯವರೆಗೆ ಯಾವಾಗಲೂ ನಾನು ನಿಮ್ಮ ಸಂಗಡ ಇರುತ್ತೇನೆ" ಎಂದು ತಿಳಿಸಿದನು (ಮತ್ತಾಯ 28:20). ಯೇಸುವು ತನ್ನ ಅಪೊಸ್ತಲರಿಗೆ ರೊಟ್ಟಿ ವಿಧಾನವನ್ನು ಬದಾಲಾಯಿಸ ಬೇಕೆಂದು ಯೇಸು ನಿರೀಕ್ಷಿಸುವಂತೆ ಅದು ಕೇಳಿಸುತ್ತದೋ? ಯೂದ 3ರಲ್ಲಿ "ಪರಿಶುದ್ಧರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು" ಎಂದು ನಾವು ಓದುತ್ತೇವೆ. ಹೊಸ ಒಡಂಬಡಿಕೆಯ ವಿಧಾನವು ಮೊದಲನೆಯ ಶತಮಾನದಲ್ಲಿ ಜೀವಿಸಿದವರಿಗಾಗಿ ಮಾತ್ರವೇ ಉದ್ದೇಶಿಸಲ್ಪಟ್ಟಿತ್ತೆಂದು ಅದು ಕೇಳಿ ಸುತ್ತದೋ? ತಾನು ಪ್ರಸಂಗಿಸಿದ ಸುವಾರ್ತೆಗಿಂತ ಭಿನ್ನವಾದ ಸುವಾರ್ತೆಯನ್ನು ಒಬ್ಬ ದೇವದೂತನು ಪ್ರಸಂಗಿಸಿದರೂ, ಆ ದೇವದೂತನು ಶಾಪಗ್ರಸ್ತನಾಗುವನು ಎಂದು ಪೌಲನು ಹೇಳಿದನು (ಗಲಾತ್ಯ 1:8). ಕೇವಲ ತಾತ್ಕಲಿಕವಾದ ವಿಧಾನವನ್ನು ಆತನ ಬೋಧನೆಯು ಸ್ಥಾಪಿಸಿತೋ?

"ಯುಗದ ಸಮಾಪ್ತಿಯವರೆಗೆ" ಎಲ್ಲರಿಗಾಗಿ ಹೊಸ ಒಡಂಬಡಿಕೆಯು ಮಾರ್ಗದರ್ಶಿಯಾಗಿರಲು ಉದ್ದೇಶಿಸಲ್ಪಟ್ಟಿದ್ದರೆ, ಆಗ "ಯುಗದ ಸಮಾಪ್ತಿಯವರೆಗೆ" ಹೊಸ ಒಡಂಬಡಿಕೆಯ ಸಭೆಯು ಒಂದು ವಿಧವಾಗಿ ಉದ್ದೇಶಿಸಲ್ಪಟ್ಟಿತ್ತೆಂದು ನಾವು ನಂಬತಕ್ಕದ್ದು. ಅಪೊಸ್ತಲರು ಎಲ್ಲಾ ಸತ್ಯದೊಳಗೆ ನಡಿಸಲ್ಪಟ್ಟರು (ಯೋಹಾನ 16:13), ಮತ್ತು ಅವರು ಕರ್ತನ ಸಭೆಯು ಸ್ಥಾಪಿಸಲ್ಪಡುವ ಪರಿಣಾಮಗೊಳ್ಳುವಂತೆ ಸುವಾರ್ತೆಯನ್ನು ಸಾರಿದರು. ಆ ಸಭೆಯು ಪ್ರೇರೇಪಿತ ಅಪೊಸ್ತಲರಿಂದ ತಮಗೆ ಕೊಡಲ್ಪಟ್ಟ ಕೆಲವೊಂದು ತತ್ವಗಳನ್ನು ಬೋಧಿಸಿತು ಮತ್ತು ಆಚರಿಸಿತು. ಆ ಸಭೆಯ ಬಗ್ಗೆ ನಾವು ಹೊಸ ಒಡಂಬಡಿಕೆಯಲ್ಲಿ ಓದುತ್ತೇವೆ; ಅದರ ಬೋಧನೆ, ಅದರ ಆರಾಧನೆ, ಮತ್ತು ಅದರ ಸಂಘಟನೆಯ ಬಗ್ಗೆ ಕಲಿತುಕೊಳ್ಳುತ್ತೇವೆ. ಈ ರೀತಿಯಲ್ಲಿ ಕ್ರಿಸ್ತನು ಸಭೆಯನ್ನು ಸ್ಥಾಪಿಸುವದರಿಂದ, ಮತ್ತು ಸಭೆಯ ಬಗ್ಗೆ ಸಂಗತಿಗಳನ್ನು ಪ್ರಕಟಿಸುವದರಿಂದ, ಬರಲಿದ್ದ ಯುಗಗಳಿಗಾಗಿ ಒಂದು ಮಾದರಿಯನ್ನು ಇಡಲು ಉದ್ದೇಶಿಸದೇ ಇದ್ದರೆ, ಆಗ ಯಾಕೆ ಆತನು ಅದನ್ನು ಮಾಡಿದನು?

ನಾವು ಇದನ್ನು ನಂಬುತ್ತೇವೆ: ಕ್ರಿಸ್ತನು ಸ್ಥಾಪಿಸಿದಂತೆ ಇದ್ದ ಸಭೆಯು ಆತನು ಬಯಸಿದಂತೆ ಇತ್ತು. ಅಪೊಸ್ತಲರ ಮುಖಾಂತರವಾಗಿ ಪ್ರಕಟಿಸಲ್ಪಟ್ಟ ಮಾದರಿಗೆ ಹೊಂದಿಕೊಂಡಿರುವವರೆಗೆ, ಸಭೆಯು ದೇವರಿಗೆ ಮೆಚ್ಚಿಕೆಯುಳ್ಳದ್ದಾಗಿರುತ್ತದೆ. ಆ

*ವಿಧಾನವನ್ನು ನಾವು ಅನುಸರಿಸಿದರೆ,* ದೇವರಿಗೆ ಮೆಚ್ಚಿಕೆಯಾಗಿರುವ ವಿಧಾನವನ್ನು ನಾವು ಅನುಸರಿಸುತ್ತಿರುವೆವೆಂಬ ನಿಶ್ಚಿತತೆಯುಳ್ಳವರಾಗಿರಬಹುದು.

ಹೊಸ ಒಡಂಬಡಿಕೆಯಲ್ಲಿ ಸಭೆಗಾಗಿ *ಒಂದೇ ವಿಧಾನವಿರಲಿಲ್ಲ* ಎಂಬುದನ್ನು ಕೆಲವರು ಆಕ್ಷೇಪಿಸುತ್ತಾರೆ. ಒಬ್ಬ ಪ್ರಸಂಗಿಯನ್ನು ಸಂಧಿಸಿ, ಹೊಸ ಒಡಂಬಡಿಕೆಯ ಸಭೆಯಂತೆ ಪುನಃಸ್ಥಾಪಿಸುವದನ್ನು ವಿವರಿಸಲು ಪ್ರಯತ್ನಿಸಿದೆನು. "ಹೀಗೆ ಹೊಸ ಒಡಂಬಡಿಕೆಯ ಸಭೆಯಂತೆ ಪುನಃಸ್ಥಾಪಿಸಲು ನೀವು ಬಯಸುವಿರೋ? ಆದರೆ *ಯಾವ* ಸಭೆಯನ್ನು? ಯೆರೂಸಲೇಮಿನಲ್ಲಿಯ, ಅಂತಿಯೋಕ್ಯದಲ್ಲಿಯ, ಎಫೆಸದಲ್ಲಿಯ ಇಲ್ಲವೇ ಕೊರಿಂಥದಲ್ಲಿಯ ಸಭೆಯಂತೆ ಪುನಃಸ್ಥಾಪಿಸುವಿರೋ?" ಇಂದಿನ ಸಭೆಯನ್ನು ಪುನಃಸ್ಥಾಪಿಸುವುದಕ್ಕಾಗಿ ಉಪಯೋಗಿಸಲಿಕ್ಕೆ ಒಂದೇ ವಿಧಾನವು ಇರದಷ್ಟು ಹೊಸ ಒಡಂಬಡಿಕೆಯ ಸಮಯಗಳಲ್ಲಿ ಸ್ಥಳಿಕ ಸಭೆಗಳು ಬಹಳ ಭಿನ್ನತೆಯುಳ್ಳವುಗಲಾಗಿದ್ದವೆಂದು ಅವನು ನಂಬಿದ್ದನು. ಅವನು ಸರಿಯಾಗಿದ್ದಾನೋ?

ಪ್ರಥಮ ಶತಮಾನದ ಕರ್ತನ ಸಭೆಯ ಸ್ಥಳಿಕ ಸಭೆಗಳಲ್ಲಿ ಕೆಲವು ಭಿನ್ನತೆಗಳು ಅಸ್ತಿತ್ವದಲ್ಲಿದ್ದವು. ಆದರೆ ಆ ಎಲ್ಲಾ ಭಿನ್ನತೆಗಳು ಎರಡು ಮೂಲಗಳಿಗೆ ಗುರುತಿಸಲ್ಪಡಬಹುದು. ತ್ವರೆಪಡುವ ವಿಷಯಗಳಲ್ಲಿ ಭಿನ್ನತೆಗಳು ಕೆಲವು ಇದ್ದವು, ಮತ್ತು ಅವರ ಕೆಲವು ಭಿನ್ನತೆಗಳು ಅಪೊಸ್ತಲರ ಬೋಧನೆಯಿಂದಲ್ಲ ಆದರೆ ಅಪೊಸ್ತಲಿಕ ಬೋಧನೆಗೆ ಕಿವಿಗೊಡದೇ ಹೋದದ್ದರಿಂದ ಬಂದವುಗಳಾಗಿದ್ದವು. ಕ್ರಿಸ್ತನು ಸ್ಥಾಪಿಸಿದಂತೆ ಸಭೆಯು ಪರಿಪೂರ್ಣವಾಗಿತ್ತು, ಆದರೆ ಅದು ಅಪರಿಪೂರ್ಣ ಮನುಷ್ಯರಿಂದ ರಚಿಸಲ್ಪಟ್ಟಿತು. ಅದರ ಆಪರಿಪೂರ್ಣ ಸದಸ್ಯರ ತಪ್ಪುಗಳನ್ನಲ್ಲ ಆದರೆ ಅದರ ಪರಿಪೂರ್ಣತೆಯನ್ನು ಪುನಃಸ್ಥಾಪಿಸಲು ನಾವು ಬಯಸುತ್ತೇವೆ.

ಇದಲ್ಲದೇ, ಒಂದು ವಿಶ್ವಾಸದ ಅವಶ್ಯಕ ಭಾಗವಾಗಿದ್ದ ಕ್ಷೇತ್ರಗಳಲ್ಲಿ, ಕರ್ತನ ಸಭೆಯ *ಸ್ಥಳಿಕ ಸಭೆಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಒಂದೇ ರೀತಿಯಲ್ಲಿ ಇದ್ದವೆಂದು ಪುರಾವೆಯು ತೋರಿಸುತ್ತದೆ.* ಪ್ರತಿಯೊಂದು ಸಭೆಯಲ್ಲಿ ಇಲ್ಲವೇ ಸ್ಥಳಿಕ ಸಭೆಯಲ್ಲಿ ಹಿರಿಯರು ನೇಮಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 14:23); ಅವರು ಆರಾಧನೆಯಲ್ಲಿ ಹಾಡಿದರು (ಎಫೆಯ 5:19; ಕೊಲೊಸ್ಸೆ 3:17); ಅವರು ಕರ್ತನ ಬೋಜನದಲ್ಲಿ ಪಾಲುಗಾರರಾದರು (ಅಪೊಸ್ತಲರ ಕೃತ್ಯಗಳು 2:42; ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 11); ಅವರು ಸಮೃದ್ಧಿ ಹೊಂದಿದಂತೆ ಕೊಡಬೇಕಾಗಿತ್ತು (1 ಕೊರಿಂಥ 16:1, 2); ಮುಳುಗೇಳಿಸುವಿಕೆಯಿಂದ ಬಾಪ್ತಿಸ್ಮವನ್ನು ಆಚರಿಸಿದರು (ಅಪೊಸ್ತಲರ ಕೃತ್ಯಗಳು 8:39; ರೋಮಾಪುರ 6:3, 4; ಕೊಲೊಸ್ಸೆ 2:12); ಒಂದೇ ರೀತಿಯಲ್ಲಿ ಈ ಎಲ್ಲರೂ ರಕ್ಷಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 15:9, 11); ಒಂದು ಸಭೆಗಾಗಿ ಉದ್ದೇಶಿಸಿದ್ದ ಪ್ರೇರಿತ ಪತ್ರಗಳು ಎಲ್ಲಾ ಸಭೆಗಳಲ್ಲಿ ಓದಲ್ಪಟ್ಟವು (ಕೊಲೊಸ್ಸೆ 4:16). "ಈ ನಿಮಿತ್ತದಿಂದ ಕರ್ತನಲ್ಲಿ ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು ಕ್ರಿಸ್ತನ ಸೇವೆಯಲ್ಲಿರುವ ನನ್ನ ನಡವಳಿಯನ್ನು ಅಂದರೆ ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು" (1 ಕೊರಿಂಥ 4:17) ಎಂದು ಪೌಲನು ಬರೆದನು. ಹಾಗಾದರೆ ಹೊಸ ಒಡಂಬಡಿಕೆಯ ಕರ್ತನ ಸಭೆಯ ಸ್ಥಳಿಕ ಸಭೆಗಳು ಅವುಗಳಲ್ಲಿ ಇಂದಿನ ಸಭೆಗಾಗಿ ಒಂದೇ ವಿಧಾನವನ್ನು ಕಂಡುಕೊಳ್ಳದಷ್ಟು ಬಿನ್ನವಾಗಿದ್ದವು ಎಂದು ಯಾರಾದರೂ ಹೇಗೆ ಹೇಳಬಹುದು?

ಎರಡನೆಯದು, ಸಭಾಪಂಗಡವಲ್ಲದ ಕ್ರೈಸ್ತತ್ವವನ್ನು ಪುನಃಸ್ಥಾಪಿಸಲು ಪ್ರಯತ್ನಿಸುವುದು *ಅನಾವಶ್ಯಕವಾಗಿದೆ* ಯಾಕಂದರೆ ಎಲ್ಲಾ ಸಭಾಪಂಗಡಗಳು ಒಂದೇ

ಸಭೆಯ ಶಾಖೆಗಳಾಗಿವೆ ಎಂದು ಇತರರು ಹೇಳುತ್ತಾರೆ.

ಅವರು ಸರಿಯಾಗಿರುವರೋ? ಸಭಾಪಂಗಡಗಳು ಸಭೆಯ ಶಾಖೆಗಳು, ಇಡೀಯಾದದ್ದರ ಭಾಗಗಳು ಆಗಿವೆಯೋ? ಅವು ಸಭಾಪಂಗಡತೆಯ ಶಾಖೆಗಳು ಇಲ್ಲವೇ ಪ್ರೊಟೆಸ್ಟಾಂಟತತ್ವದ ಭಾಗಗಳು ಆಗಿರಬಹುದು, ಆದರೆ ಹೊಸ ಒಡಂಬಡಿಕೆಯಲ್ಲಿ ನಾವು ಓದುವ ಸಭೆಯ ಭಾಗ ಅವು ಆಗಿರುವವೆಂಬುದರ ಬಗ್ಗೆ ನಾವು ಸಂಶಯ ಪಡುತ್ತೇವೆ. ಹೊಸ ಒಡಂಬಡಿಕೆಯಲ್ಲಿ "ಶಾಖೆಗಳು" ಎಂಬುದರ ಬಗ್ಗೆ ಒಂದು ಸಲ ಮಾತ್ರ ಓದುತ್ತೇವೆ: "ನಾನೇ ದ್ರಾಕ್ಷೆ ಬಳ್ಳಿ, ನೀವು ಕೊಂಬೆಗಳು" (ಯೋಹಾನ 15:5) ಎಂದು ಕ್ರಿಸ್ತನು ಹೇಳಿದನು. ಆದರೆ ಆತನು ಮುಂದುವರಿದು ಹೀಗೆ ಹೇಳಿದನು, "ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿ ಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟು ಹೋಗುತ್ತವೆ" (ಯೋಹಾನ 15:6). ಕ್ರಿಸ್ತನಲ್ಲಿಯ ಪ್ರತಿಯೊಬ್ಬ ವ್ಯಕ್ತಿಯು ಒಂದು ಕೊಂಬೆಯಾಗಿದ್ದಾನೆ!

ಒಂದು ಕೊಂಬೆಯಿಂದ ಕಿತ್ತಳೆ ಹಣ್ಣನ್ನು, ಇನ್ನೊಂದು ಕೊಂಬೆಯಿಂದ ಮಾವಿನ ಹಣ್ಣನ್ನು ಮತ್ತೊಂದು ಕೊಂಬೆಯಿಂದ ಕಲ್ಲಂಗಡಿ ಹಣ್ಣನ್ನು ಹೊಂದಿರುವ ದ್ರಾಕ್ಷೆಬಳ್ಳಿಯನ್ನು ನೀವೆಂದಾದರೂ ನೋಡಿರುವಿರೋ? ಇಲ್ಲವೇ ಇಲ್ಲ. ಒಂದು ಬಳ್ಳಿಯ ಪ್ರತಿಯೊಂದು ಕೊಂಬೆಯಲ್ಲಿ ಒಂದೇ ಜಾತಿಯ ಫಲಗಳನ್ನು ಫಲಿಸುವುದು. ಆದರೆ ಸಭಾಪಂಗಡಗಳು ಒಂದೇ ರೀತಿಯ ಫಲವನ್ನು ಫಲಿಸುತ್ತಿರುವದಿಲ್ಲ. ಅವುಗಳ ಪರಿಣಾಮಗಳು ಕಿತ್ತಳೆ ಹಣ್ಣು, ಮಾವಿನ ಹಣ್ಣು ಮತ್ತು ಕಲ್ಲಂಗಡಿ ಹಣ್ಣಿನಂತೆ ಭಿನ್ನವಾಗಿರುತ್ತವೆ. ಆದುದರಿಂದ, ಅವು ಎಲ್ಲವೂ ಒಂದೇ ಹೊಸ ಒಡಂಬಡಿಕೆಯ ಸಭೆಯ ಎಲ್ಲಾ ಕೊಂಬೆಗಳಾಗಿರುವದಿಲ್ಲ; ಅದು ಪ್ರತಿಯೊಂದು ತಾನೇ ಒಂದೊಂದು ಬಳ್ಳಿಯಾಗಿದೆ.

ಮೂರನೆಯದು, ಇಂದು ಸಭಾಪಂಗಡವಲ್ಲದ ಕ್ರೈಸ್ತತ್ವವನ್ನು *ಪುನಃ* ಉತ್ಪಾದಿಸಲು ಪ್ರಯತ್ನಿಸುವುದು ವ್ಯಾವಹಾರಿಕವಾದದ್ದಾಗಿರುವದಿಲ್ಲವೆಂದು ಕೆಲವು ಆಕ್ಷೇಪಿಸುತ್ತಾರೆ.

ಹೊಸ ಒಡಂಬಡಿಕೆಯ ಕ್ರೈಸ್ತತ್ವವನ್ನು ನಾವು ಪುನಃಸ್ಥಾಪಿಸಿದ ನಂತರವೂ ನಾವು ಇನ್ನೊಂದು ಸಭಾಪಂಗಡವನ್ನು ರಚಿಸಿದ್ದೇವೆಂದು ಕೆಲವರು ಹೇಳುತ್ತಾರೆ.

"ಒಂದು ಹೆಸರು" ಆಗಿರುವಂಥ "ಸಭಾಪಂಗಡದ" ಅರ್ಥವನ್ನು ಮೊದಲು ನಾವು ಕೊಟ್ಟಿದ್ದನ್ನು ಅವರು ತೆಗದುಕೊಂಡು, ಒಂದು ಸಭೆಗೆ ಒಂದು *ಹೆಸರು* ಇದ್ದರೆ, ಆಗ ಅದು ಒಂದು ಸಭಾಪಂಗಡವಾಗುತ್ತದೆಂದು ತೀರ್ಮಾನಿಸುತ್ತಾರೆ. ನಾವು ಒಂದು ಹೆಸರನ್ನು ಧರಿಸುವದರಿಂದ ನಾವು ಒಂದು ಸಭಾಪಂಗಡವಾಗಿರುವೆವೋ?

ಇತರ ಎಲ್ಲಾ ಹೆಸರುಗಳನ್ನು ಹೊರತು ಪಡಿಸಲಿಕ್ಕೆ ಒಂದು ಹೆಸರನ್ನು ಹೊಂದಿಕೊಂಡಿರುವೆವೆಂದು ನಾವು ಹೇಳುವದಿಲ್ಲ ಎಂದು ದಯವಿಟ್ಟು ಗಮನಿಸಿರಿ. "ಸಭೆ," "ದೇಹ," "ಕ್ರಿಸ್ತನ ಸಭೆ" ಇಲ್ಲವೇ "ಚರ್ಚ್ ಆಫ್ ಕ್ರೈಸ್ಟ್" ಎಂಬವುಗಳು ಸಂಬಂಧದ ಅಂಕಿತಗಳಷ್ಟು ಹೆಸರುಗಳಾಗಿರುವದಿಲ್ಲ: ಸಭೆಯು ಕ್ರಿಸ್ತನಿಗೆ ಒಳಪಟ್ಟದ್ದಾಗಿರುತ್ತದೆ. ಇವೆಲ್ಲವುಗಳೂ ಹೊಸ ಒಡಂಬಡಿಕೆಯಲ್ಲಿ ಕಂಡುಬರುವ ವ್ಯಕ್ತಪಡಿಸುವಿಕೆಗಳಾಗಿರುತ್ತವೆ. ಒಂದು ಸಭಾಪಂಗಡವನ್ನು ಮಾಡಲಿಕ್ಕೆ *ಹೆಸರೇ* ಎಲ್ಲವೂ ಆಗಿದ್ದರೆ, ಆಗ ಹೊಸ ಒಡಂಬಡಿಕೆಯ ಸಭೆಯು ಒಂದು ಸಭಾಪಂಗಡವಾಗಿತ್ತು.

ಒಂದು ಸಭಾಪಂಗಡವನ್ನು ಮಾಡಲಿಕ್ಕೆ ಒಂದು ಹೆಸರೇ ಎಲ್ಲವನ್ನೂ ತೆಗೆದುಕೊಳ್ಳುವದಿಲ್ಲ. ಇತರ ಗುಂಪುಗಳಿಂದ ಅವುಗಳ ಭಿನ್ನತೆಗಳ ಕಾರಣದಿಂದ ಸಭಾಪಂಗಡಗಳಿಗೆ ಹೆಸರುಗಳು ಇಡಲ್ಪಟ್ಟಿವೆ. ಸಭೆಗಳ ಮಧ್ಯದಲ್ಲಿಯ ಕೇವಲ

ಭಿನ್ನತೆಯು ಅವುಗಳ ಹೆಸರಾಗಿದ್ದರೆ, ಸಭಾಪಂಗಡಗಳು ಇರುತ್ತಿರಲೇ ಇಲ್ಲ. ಎಲ್ಲವೂ ಒಂದೇ ಆಗಿರುತ್ತಿದ್ದವು. ಒಂದು ಸಭೆಗೆ ಒಂದು ಹೆಸರಿರುವದರಿಂದ ಅದು ಸುಮ್ಮನೇ ಒಂದು ಸಭಾಪಂಗಡವಾಗಿರುವದಿಲ್ಲ.

ಒಂದು ಸಭೆಗೆ ಪ್ರತ್ಯೇಕ ಅಸ್ತಿತ್ವ, ಸಾರ್ವಜನಿಕವಾದ ನಂಬಿಕೆಗಳು ಮತ್ತು ಆಚರಣೆಗಳು ಹಾಗೂ ಲಿಖಿತ ಇಲ್ಲವೇ ಲಿಖಿತವಾಗಿರದ ವಿಶ್ವಾಸ ಸೂತ್ರ ಇದ್ದ ಕಾರಣ ಅದು ಒಂದು ಸಭಾಪಂಗಡವಾಗಿದೆಯೆಂದು ಕೆಲವರು ಹೇಳುತ್ತಾರೆ. ಆ ನಿರೂಪಣೆಯನ್ನು ಉಪಯೋಗಿಸುವದರಿಂದ, ಹೊಸ ಒಡಂಬಡಿಕೆಯ ಸಭೆಯು ಒಂದು ಸಭಾಪಂಗಡವಾಗುತ್ತದೆ ಮತ್ತು ಅದು ಆಗಿತ್ತೆಂದು ಯಾರೂ ನಂಬುವದಿಲ್ಲ. ಒಂದು ಸಭೆಯು ಇತರ ಗುಂಪುಗಳಿಂದ ಬೇರೆಯಾಗಿದ್ದು ತನ್ನ ಸ್ವಂತ ತತ್ವ ಮತ್ತು ಆಚರಣೆಗಳನ್ನು ಹೊಂದಿದಕಾರಣದಿಂದ ಅದು ಸಭಾಪಂಗಡವಾಗಿರಲಾರದು.

ಹೊಸ ಒಡಂಬಡಿಕೆಯ ಸಭೆಯ ಪುನಃಸ್ಥಾಪನೆಯು ಸಮಾಜದಲ್ಲಿ ಇನ್ನೂ ಹೆಚ್ಚಿನ ಧಾರ್ಮಿಕ ವಿಭಜನೆಯನ್ನು ಉಂಟುಮಾಡುತ್ತದೆಂಬ ಕಾರಣದಿಂದ ಕೆಲವರು ಅದನ್ನು ವಿರೋಧಿಸುತ್ತಾರೆ. ನಾವು ಒಂದು ಸಮಾಜದಲ್ಲಿ ಒಂದು ಕೆಲಸವನ್ನು ಪ್ರಾರಂಭಿಸುವಾಗ, ಅಲ್ಲಿರುವ ಸಭಾಪಂಗಡದ ಸ್ಥಿತಿಯನ್ನು ತೆಗೆದು ಹಾಕುವದರ ಬದಲು, ಅಲ್ಲಿರುವ ಸಭೆಗಳಿಗೆ ಕೂಡಿಸಿ *ಇನ್ನೊಂದು ಸಭೆಯನ್ನು* ತರುವದರಿಂದ ಅದನ್ನು ಇನ್ನೂ ಹೆಚ್ಚು ತೀವ್ರಗೊಳಿಸುತ್ತೇವೆ.

ಈ ಹೇಳಿಕೆಯಲ್ಲಿ ಸತ್ಯವಿರುವಂತೆ ತೋರುತ್ತದೆ. ಒಂದು ಸಮಾಜದಲ್ಲಿ ನಾವು ಕೆಲಸ ಮಾಡಲು ಪ್ರಾರಂಭಿಸುವಾಗ, ಪರಿಣಾಮವು ಇನ್ನೊಂದು ಸಭೆಯಾಗುತ್ತದೆ, ಮತ್ತು ಹೊರಗಿನವರು ನೋಡುವಾಗ, ಅದು ಇನ್ನೊಂದು ಸಭಾಪಂಗಡವಾಗಿರುತ್ತದೆ.

ಆದರೆ ಹೊರಗಣ ತೋರಿಕೆಗಳು ಮೋಸಕರವಾದವುಗಳಾಗಿರಬಹುದು. ಸಭಾಪಂಗಡವಲ್ಲದ ಕ್ರೈಸ್ತತ್ವವನ್ನು ತರಲು ಇತರ ಸಭೆಗಳೊಳಗೆ ನಾವು ಯಾಕೆ ಕೆಲಸ ಮಾಡಬಾರದು? ಆ ಪ್ರಶ್ನೆಯು ಬಹಳ ಹಿಂದೆಯೇ ತೀರಿಸಲ್ಪಟ್ಟಿದೆ. ಸಭಾಪುನಃಸ್ಥಾಪಣೆಯ ಚಳವಳಿಯ ಪ್ರಾರಂಭದಲ್ಲಿ, ಚಳವಳಿಯಲ್ಲಿಯ ನಾಯಕರು ಸಭಾಪಂಗಡತ್ವದ ಹುಚ್ಚುತನವನ್ನು ನೋಡಲು ಸಹಾಯ ಮಾಡುವ ನಿರೀಕ್ಷೆಯಲ್ಲಿ ಸಭಾಪಂಗಡದ ಸಭೆಗಳೊಂದಿಗೆ ಸಂಬಂಧಿಸಿದವರಾಗಿ ಉಳಿದಿದ್ದರು. ಅಂತಿಮವಾಗಿ, ಅವರು ಸಭಾಪಂಗಡತ್ವವನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟು ಪ್ರತ್ಯೇಕವಾಗಿ ಕೂಡಿಬರಲು ಪ್ರಾರಂಭಿಸಿದರು. ಯಾಕೆ? *ಅವರು ಒತ್ತಾಯದಿಂದ ಹೊರಗೆ ಹಾಕಲ್ಪಟ್ಟರು!* ಸಭಾಪಂಗಡವಲ್ಲದ ಕ್ರೈಸ್ತತ್ವವನ್ನು ಕುರಿತು ಕೇಳಲು ಸಭಾಪಂಗಡಗಳು ಬಯಸಲಿಲ್ಲ; ಹೊಸ ಒಡಂಬಡಿಕೆಯ ಸಭೆಗೆ ಹಿಂದಿರುಗುವುದನ್ನು ಬೇಡಿಕೊಂಡ ಜನರು ತಮ್ಮ ಪೀಠಗಳಿಂದ ಮಾತಾಡುವದನ್ನು ನಿರಾಕರಿಸಿದರು. ನಿಯಮದ ಪ್ರಕಾರದಂತೆ ಸಭಾಪಂಗಡದ ಪೀಠಗಳು ಆ ಸಮಯದಿಂದ ಸಭಾಪಂಗಡವಲ್ಲದ ಕ್ರೈಸ್ತತ್ವವನ್ನು ಪ್ರಸಂಗಿಸುವುದನ್ನು ನಿರ್ಬಂಧಿಸಿದವು.

ಸಭಾಪಂಗಡವಲ್ಲದ ಕ್ರೈಸ್ತತ್ವಕ್ಕಾಗಿರುವ ಬೇಡಿಕೆಯು ವಿಭಾಗಿಸುವಂಥದ್ದಕ್ಕೆ ಕೇವಲ ಕಾರಣವು, ಜನರು ತಮ್ಮ ಸಭಾಪಂಗಡದ ಅಂತಸ್ತನ್ನು ಬಿಟ್ಟುಕೊಡದೇ ಇರುವುದೆಂದು ತೋರುತ್ತದೆ. ಆದುದರಿಂದ, ಅವರ ಮುಖಾಂತರ ಸಭಾಪಂಗಡವಲ್ಲದ ಸಭೆಗಾಗಿ ಬಿನ್ನವಿಸಿಕೊಳ್ಳುವುದು ಅಸಾಧ್ಯವಾದದ್ದಾಗಿದೆ.

ಪ್ರತಿವಾದನೆಯ *ಸರಳ ದಾರಿಯನ್ನು* ನಾವು ವಿಚಾರಿಸೋಣ.

ಇಂದು ಸಭಾಪಂಗಡವಾಗಿರದೇ ಇರುವಂಥದ್ದು ಸಾಧ್ಯವಾಗಿದೆಯೋ? ಈ ಸೂಚನೆಯ ಬಗ್ಗೆ ಯೋಚಿಸಿರಿ: *ಅವರು ಕ್ರೈಸ್ತರಾಗುವದಕ್ಕೆ ಮತ್ತು ಕ್ರೈಸ್ತರಾಗಿರಲು*

*ಮಾಡಿದ್ದನ್ನು ನಾವು ಮಾಡಿದರೆ, ಅವರು ಏನಾಗಿದ್ದಾರೋ ನಾವು ಅದಾಗುವೆವು.* ಅದು ಸ್ಪಷ್ಟವಾಗಿರುವದಿಲ್ಲವೋ? ಹೊಸ ಒಡಂಬಡಿಕೆಯ ಸಮಯಗಳಲ್ಲಿ ಜನರು ಕ್ರೈಸ್ತರಾಗಲು ಕೆಲವು ಸಂಗತಿಗಳನ್ನು ಮಾಡಿದರು, ಮತ್ತು ಆಗ ಕ್ರೈಸ್ತರಂತೆ ಅವರು ಜೀವಿಸಿದರು ಮತ್ತು ಆರಾಧಿಸಿದರು ಹಾಗೂ ಕೆಲವೊಂದು ರೀತಿಗಳಲ್ಲಿ ಸಭೆಗಳನ್ನು ಸ್ಥಾಪಿಸಿದರು. ಈ ವಿಷಯಗಳಲ್ಲಿ ಅವರು ಮಾಡಿದ್ದನ್ನು ನಾವು ಮಾಡಿದರೆ, ಅವರಿದ್ದಂತೆ ನಾವಾಗುವೆವು - ಹೊಸ ಒಡಂಬಡಿಕೆಯ ಕ್ರೈಸ್ತರಾಗಿರುವೆವು, ಸಭಾಪಂಗಡವಲ್ಲದ ಸಭೆಯ ಸದಸ್ಯರಾಗಿರುವೆವು.

ಸಭಾಪಂಗಡದ ಮಾತುಗಳಲ್ಲಿ ಮಾತಾಡದೇ ಕ್ರೈಸ್ತತ್ವವನ್ನು ಯೋಚಿಸದಷ್ಟು ಕ್ರೈಸ್ತತತ್ವದ ವಿಭಜನೆಗಳಿಂದ ಬಾಧಿತವಾಗಿರುವುದು ತೊಂದರೆ ದಾಯಕವಾದದ್ದಾಗಿದೆ. ಸಭಾಪಂಗಡತ್ವವಿಲ್ಲದೇ ಕ್ರಿಸ್ತನ ಧರ್ಮವನ್ನು ಚಿತ್ರಿಸಲಿಕ್ಕೆ ಪ್ರಯತ್ನಿಸಿರಿ:

ಮೂರು ಸಭಾಪಂಗಡಗಳು "ಐಕ್ಯತೆಯ" ಕೂಟ ನಡಿಸಲು ತೀರ್ಮಾನಿಸುವ ವೆಂದು ಕಲ್ಪಿಸಿಕೊಳ್ಳಿರಿ, ಅವರು ಒಂದು ಹಾಲನ್ನು ಬಾಡಿಗೆಗೆ ಪಡೆಯುತ್ತಾರೆ, ಒಬ್ಬ ಪ್ರಸಂಗಿಯನ್ನು ತರುತ್ತಾರೆ. ಯಾರನ್ನೂ ವಿರೋಧಿಸದೇ, ಸುವಾರ್ತಾ ಕೂಟದಲ್ಲಿ ಪ್ರಸಂಗಿಯು, ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮ ದಿನದಂದು ಪೇತ್ರನು ಪ್ರಸಂಗಿಸಿದ್ದನ್ನು ಪ್ರಸಂಗಿಸಬೇಕೆಂದು ತೀರ್ಮಾನಿಸುತ್ತಾರೆ. ಅನಂತರ ಮಾರ್ಪಾಟು ಹೊಂದಿ ಬರುವವರು ತಾವು ಯಾವ ಸಭೆಗೆ ಸೇರಿಕೊಳ್ಳಲು ಬಯಸುವವರೆಂಬುದನ್ನು ಆಯ್ದುಕೊಳ್ಳಲಿ ಎಂದೂ ನಿರ್ಣಯಿಸಿದರು.

ಸುವಾರ್ತಾ ಕೂಟವು ನಡಿಸಲ್ಪಟ್ಟಿತು. ಪ್ರಸಂಗಿಯು ಕ್ರಿಸ್ತನನ್ನು ಪ್ರಸಂಗಿಸಿದನು. ಜನರು ಕ್ರಿಸ್ತನಲ್ಲಿ ನಂಬಿ ಪಾಪದ ಅರುಹನ್ನು ಹೊಂದಿದರು. ಪ್ರಸಂಗಿಯು, ಪೇತ್ರನಂತೆ, ಅವರಿಗೆ ಹೀಗೆ ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮ ದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). ಆಗ, ಪಂಚಾಶತ್ತಮ ದಿನದಂದು ಜನರು ಮಾಡಿದಂತೆ, ಸಂತೋಷದಿಂದ ವಾಕ್ಯವನ್ನು ಸ್ವೀಕರಿಸಿದವರು ಬಾಪ್ತಿಸ್ಮ ಹೊಂದಿದರು. ಇನ್ನೂರು ಬಾಪ್ತಿಸ್ಮಗಳೊಂದಿಗೆ ಕೂಟವು ಅಂತ್ಯಗೊಂಡಿತು.

ಅನಂತರದಲ್ಲಿ, ಎರಡನೂರು ಜನ ಮಾರ್ಪಾಟು ಹೊಂದಿದವರು ಮೂರು ಸಭೆಗಳಲ್ಲಿ ಒಂದನ್ನು ಸೇರುವ ಅವಕಾಶ ಕೊಡಲ್ಪಟ್ಟರು. ಐವತ್ತು ಜನ ಮಾರ್ಪಾಟು ಹೊಂದಿದವರು ಸಭಾಪಂಗಡ Aಯನ್ನು ಸೇರಿಕೊಂಡರು ಇತರ ಐವತ್ತು ಜನರು ಸಭಾಪಂಗಡ Bಯನ್ನು ಮತ್ತು ಬೇರೆ ಐವತ್ತು ಜನರು ಸಭಾಪಂಗಡ Cಯನ್ನು ಸೇರಿ ಕೊಂಡರು. "ನಾವು ಯಾವುದೇ ಸಭಾಪಂಗಡವನ್ನು ಯಾಕೆ ಸೇರಿಸಿಕೊಳ್ಳಬೇಕು. ಹೊಸ ಒಡಂಬಡಿಕೆಯ ಸಮಯಗಳಲ್ಲಿಯ ಜನರಂತೆ ನಾವು ಪ್ರಾರಂಭಿಸಿದ್ದೇವೆ, ಮತ್ತು ನಾವು ಅವರು ಮಾಡಿದಂತೆ ಮುಂದುವರಿಯುತ್ತೇವೆ" ಎಂದು ಇತರ ಐವತ್ತು ಜನರು ಹೇಳಿದರು. ಆದುದರಿಂದ, ಆ ಅಂತಿಮ ಐವತ್ತು ಜನರು ಹೊಸ ಒಡಂಬಡಿಕೆಯ ಸಭೆಯಂತೆ ಒಂದು ಸಭೆಯಾಗಿ ತಮ್ಮನ್ನು ಸಂಘಟಿಸಿಕೊಂಡರು.

ಇಲ್ಲಿ ಎರಡು ಪ್ರಶ್ನೆಗಳಿವೆ. ಮೊದಲನೆಯದು, ಕೊನೆಯ ಐವತ್ತು ಜನರನ್ನು ಕುರಿತಾಗಿ, ಅವರು ಯಾವ ಸಭೆಯ ಸದಸ್ಯರಾದರು? ಹೊಸ ಒಡಂಬಡಿಕೆಯ ವಿಧಾನದಲ್ಲಿ ಅವರು ತಮ್ಮ ಕ್ರೈಸ್ತ ಜೀವನ ಪ್ರಾರಂಭಿಸಿದ್ದರೆ, ಮತ್ತು ಆಗ ಆ ವಿಧಾನವನ್ನು ಅನುಸರಿಸುವದನ್ನು ಮುಂದುವರಿಸಿದರೆ, ಅವರು ಹೊಸ ಒಡಂಬಡಿಕೆಯ ಸಭೆಯಲ್ಲದೇ ಬೇರೇನು ಆಗಿರುವರು? ಎರಡನೆಯದು, ಮಾರ್ಪಾಟು ಹೊಂದಿದ ಆ ಎಲ್ಲಾ ಇನ್ನೂರು

ಜನರನ್ನು ಕುರಿತಾಗಿ, ಅವರು ನಿಜವಾಗಿಯೂ ಸುವಾರ್ತೆಗೆ ವಿಧೇಯರಾದರೆಂದು ತಿಳಿದುಕೊಂಡು, ಮೂರರಲ್ಲಿ ಒಂದನ್ನು ಸೇರಿಕೊಳ್ಳಲು ತೀರ್ಮಾನಿಸುವ *ಮೊದಲು ಯಾವ* ಸಭಾಪಂಗಡದ ಸದಸ್ಯರು ಅವರಾಗಿದ್ದರು? ಯಾವುದೇ ಸಭಾಪಂಗಡದ ಸದಸ್ಯರಾಗಿರದಿದ್ದರೆ. ಯಾವುದೇ ಸಭಾಪಂಗಡವನ್ನು ಸೇರುವ ಅವಶ್ಯಕತೆ ಅವರಿಗೆ ಯಾಕೆ ಇತ್ತು? ಯಾವುದೇ ಸಭಾಪಂಗಡದ ಸದಸ್ಯರಾಗಿರದೇ ಕರ್ತನ ಸಭೆಯ ಸದಸ್ಯರಾಗಿರಲು, ರಕ್ಷಿಸಲ್ಪಡಲು ಅವರಿಗೆ ಸಾಧ್ಯವಿಲ್ಲವೇ?

ಹೊಸ ಒಡಂಬಡಿಕೆಯ ಸಮಯಗಳಲ್ಲಿ ಜನರು ಕ್ರೈಸ್ತರಾಗಲು ಮತ್ತು ಕ್ರೈಸ್ತರಂತೆ ಜೀವಿಸಲು ಏನು ಮಾಡಿದರೋ ಅದನ್ನು ಇಂದು ಮಾಡಿದರೆ, ಅವರು ಹೊಸ ಒಡಂಬಡಿಕೆಯ ಸಮಯಗಳಲ್ಲಿ ಆ ಜನರು ಏನಾಗಿದ್ದಾರೋ ಅದರಂತೆ ಮತ್ತು ಹೊಸ ಒಡಂಬಡಿಕೆಯ ಸಭಾಪಂಗಡವಲ್ಲದ ಸಭೆಯಂತೆ ಆಗುವರೆಂದು ನಾವು ಒತ್ತಿ ಹೇಳುತ್ತೇವೆ.

ನಮ್ಮ ಧ್ಯೇಯವನ್ನು ನಿರೂಪಿಸಿ ಪ್ರತಿವಾದಿಸಿದ್ಧನಂತರ, ಪ್ರಶ್ನೆಗೆ ಉತ್ತರ ಕೊಡಲು ನಾವು ಸಿದ್ಧರಾಗಿದ್ದೇವೆ. *ಒಂದು ಸಭೆಯು ಇನ್ನೊಂದು ಸಭೆಯಷ್ಟೇ ಒಳ್ಳೆಯದಾಗಿದ್ದರೆ, ಆಗ ಸಭಾಪಂಗಡವಾಗಿರದೇ ಇರುವದನ್ನು ಕುರಿತು ಚಿಂತಿಸುವಿರಿ ಯಾಕೆ?*

## ಸಭಾಪಂಗಡವಲ್ಲದ ಕ್ರೈಸ್ತತ್ವಕ್ಕಾಗಿ ಒಂದು ಮನವಿ

ಅಂತಿಮವಾಗಿ, ಸಭಾಪಂಗಡವಲ್ಲದ ಕ್ರೈಸ್ತತ್ವಕ್ಕಾಗಿ ಒಂದು ಮನವಿಯನ್ನು ಯೋಚಿಸೋಣ. ಸಭಾಪಂಗಡವಾಗಿರದೇ ಇರಲಿಕ್ಕೆ ಉತ್ತಮವಾದ ಕಾರಣಗಳಿರುತ್ತ ವೆಯೋ? ಉತ್ತರಕ್ಕಾಗಿ ಪಾಠದ ಶಿರೋನಾಮಕ್ಕೆ ನಾವು ಹಿಂದಿರುಗಿ ಹೋಗೋಣ; ಒಂದು ಸಭೆಯು ಇನ್ನೊಂದು ಸಭೆಯಷ್ಟು ಒಳ್ಳೆಯದಾಗಿರದೇ ಇರುವದರಿಂದ *ಸಭಾಪಂಗಡ ವಾಗಿರದೇ* ಇರಬೇಕೆಂದು ನಿಮ್ಮನ್ನು ಬಿನ್ನವಿಸುತ್ತೇನೆ.

ದಯವಿಟ್ಟು ತಪ್ಪಾಗಿ ತಿಳಿದು ಕೊಳ್ಳಬೇಡಿರಿ. ಒಂದು ಸಭೆಯು ಇನ್ನೊಂದು ಸಭೆಯಷ್ಟು ಒಳ್ಳೆಯದಾಗಿರುವದಿಲ್ಲ ಎಂದು ನಾನು ಹೇಳುತ್ತಿರುವದಿಲ್ಲ. ಯಾವುದೇ ಸಭಾಪಂಗಡವು ಕರ್ತನ ಸಭೆಯಷ್ಟು ಒಳ್ಳೆಯದಾಗಿದೆಯೇ ಇಲ್ಲವೋ ಎಂಬುದನ್ನು ಪ್ರಶ್ನಿಸುತ್ತಿದ್ದೇನೆ. ಕರ್ತನ ಸಭೆಯಷ್ಟು ಒಂದು ಒಳ್ಳೆಯದಾಗಿದ್ದರೆ, ಆಗ ವಿಷಯವನ್ನು ಯೋಚಿಸಿ, ಸಭಾಪಂಗಡವಾಗಿರದೇ ಇರುವದಕ್ಕೆ ಯಾವ ಕಾರಣವೂ ಅಸ್ತಿತ್ವದಲ್ಲಿರುವದಿಲ್ಲವೆಂದು ಹೇಳುತ್ತೇವೆ.

ಯಾವುದೇ ಸಭಾಪಂಗಡವು ಹೊಸ ಒಡಂಬಡಿಕೆಯ ಸಭೆಯಂತೆ ಒಳ್ಳೆಯದಾಗಿರುವುದೋ ಎಂದು ನಾವು ಪ್ರಶ್ನಿಸುವಂತೆ, ಈ ಪ್ರಶ್ನೆಗಳ ಬಗ್ಗೆ ಯೋಚಿಸೋಣ:

*ಒಂದು ದೇಹವು ಇನ್ನೊಂದು ದೇಹದಂತೆ ಒಳ್ಳೆಯದಾಗಿರುವುದೋ?* ಇತರ ದೇಹಕ್ಕಿಂತ ನಿಮ್ಮ ದೇಹವು ನಿಮಗೆ ಹೆಚ್ಚು ಮಹತ್ವದ್ದಾಗಿರುತ್ತದಲ್ಲವೇ? ಹಾಗೆಯೇ, ಸಭೆಯು ಕ್ರಿಸ್ತನ ದೇಹವಾಗಿದೆ (ಎಫೆಸ 1:22, 23). ಯಾವುದೋ ಇತರ ದೇಹವು (ಆತನು ಪ್ರಾರಂಭಿಸದೇ ಇರುವ ಒಂದು ಸಭಾಪಂಗಡವು) ಕ್ರಿಸ್ತನಿಗೆ ಆತನ ಸ್ವಂತ ದೇಹವು ಅಷ್ಟು ಅಮೂಲ್ಯವಾದದ್ದಾಗಿರುವುದೋ?

*ಒಬ್ಬ ಮದಲಗಿತ್ತಿಯು ಇನ್ನೊಬ್ಬಳಷ್ಟು ಒಳ್ಳೆಯವಳಾಗಿರವಳೋ?* ಪುರುಷರೇ, ನಿಮ್ಮ ಸ್ವಂತ ಮದಲಗಿತ್ತಿಯರಷ್ಟು ಇತರ ಮದಲಗಿತ್ತಿಯರಿಗೆ ಬೆಲೆ ಕೊಡುವಿರೋ? ನಿಮಗೆ ಇರದೇ ಇರುವುದು ಒಳ್ಳೆಯದು! ಸಭೆಯು ಕ್ರಿಸ್ತನ ಮದಲಗಿತ್ತಿಯಂತೆ ಸಹ ಚಿತ್ರೀಕರಿಸಲ್ಪಟ್ಟಿದೆ (ಎಫೆಸ 5:23-25; ರೋಮಾಪುರ 7:4). ಕ್ರಿಸ್ತನು ತನ್ನ ಸ್ವಂತ

ಮದಲಗಿತ್ತಿಗೆ ಬೆಲೆ ಕೊಡುವಂತೆ ಬೇರೆ ಯಾವುದೇ ಸಭೆಗೆ ಬೆಲೆ ಕೊಡುವನೋ?

*ಒಂದು ಕುಟುಂಬವು ಇನ್ನೊಂದು ಕುಟುಂಬದಷ್ಟು ಒಳ್ಳೆಯದಾಗಿರುವುದೋ?* ನಮ್ಮ ಸ್ವಂತ ಕುಟುಂಬಕ್ಕಾಗಿ ನಮ್ಮ ಹೃದಯಗಳಲ್ಲಿ ಒಂದು ವಿಶೇಷವಾದ ಸ್ಥಳವಿರುವುದು; ಇನ್ನೊಂದಕ್ಕಾಗಿ ನಾವು ಅದನ್ನು ಕೊಡುವುದಿಲ್ಲ. ಸಭೆಯು ದೇವರ ಕುಟುಂಬವಾಗಿದೆ (1 ತಿಮೊಥೆ 3:15). ದೇವರು ತನ್ನ ಸ್ವಂತ ಕುಟುಂಬಕ್ಕೆ ಕೊಡುವಷ್ಟು ಬೆಲೆಯನ್ನು ಇತರ ಕುಟುಂಬಕ್ಕೆ ಕೊಡುವನೋ?

*ಯಾವುದೇ ಸಭಾಪಂಗಡದಲ್ಲಿ ರಕ್ಷಣೆಯು ಕಂಡುಕೊಳ್ಳಲ್ಪಡಬಹುದೋ?* ರಕ್ಷಣೆಯು ಸಭೆಯಲ್ಲಿ ಕಂಡುಕೊಳ್ಳಲ್ಪಡಬಹುದು. ಕ್ರಿಸ್ತನು ಸಭೆಯನ್ನು ಪ್ರೀತಿಸಿದನು ಅದಕ್ಕಾಗಿ ಪ್ರಾಣ ಕೊಟ್ಟನು ಮತ್ತು ಸಭೆಯನ್ನು ರಕ್ಷಿಸುವನು (ಎಫೆಸ 5:23-25). ರಕ್ಷಿಸಲ್ಪಟ್ಟವರು ಸಭೆಗೆ ಕೂಡಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:47) ಅದನ್ನು ಯಾವುದೇ ಸಭಾಪಂಗಡಕ್ಕೆ ಹೇಳಬಹುದೋ?

## ಮುಕ್ತಾಯ

ನಾವು ಏನನ್ನು ತೀರ್ಮಾನಿಸಬಹುದು? ಒಂದು ಸಭಾಪಂಗಡವು ಇನ್ನೊಂದರಷ್ಟು ಒಳ್ಳೆಯದಾಗಿರಬಹುದು, ಆದರೆ ಯಾವುದೇ ಸಭಾಪಂಗಡವು ಕರ್ತನ ಸಭೆಯಷ್ಟು ಒಳ್ಳೆಯದಾಗಿರುವದಿಲ್ಲ. ಆದುದರಿಂದ, ಸಭಾಪಂಗಡವಾಗಿರದೇ ಇರುವ ಚಿನ್ನಹವನ್ನು ಸ್ವೀಕರಿಸಬೇಕೆಂದು ನಾವು ಒತ್ತಾಯ ಮಾಡುತ್ತೇವೆ ಯಾಕಂದರೆ ನೀವು ಕ್ರಿಸ್ತನ ದೇಹದ ಭಾಗವಾಗಿರುವದಕ್ಕೆ ಕ್ರಿಸ್ತನ ಮದಲಗಿತ್ತಿಯಾಗಿರುವದಕ್ಕೆ ಹಾಗೂ ದೇವರ ಕುಂಟುಂಬವಾಗಿರಲಿಕ್ಕೆ - ನಿಶ್ಚಿತತೆಯುಳ್ಳವರಾಗಿರಲು ಇದೊಂದೇ ಮಾರ್ಗವೆಂದು ನಾವು ನಂಬುತ್ತೇವೆ. ಮತ್ತು ಕ್ರಿಸ್ತನು ರಕ್ಷಿಸುವ ಜನರ ಒಂದು ಭಾಗ ನೀವಾಗಿರಲು ಕೇವಲ ಒಂದು ಮಾರ್ಗವೆಂದು ನಂಬುತ್ತೇವೆ.

ಬದಲಾಗುತ್ತಿರುವ ಸಭೆಗಳ ಬಗ್ಗೆ ನೀವು ಎಂದಾದರೂ ಯೋಚಿಸಿರುವಿರೋ? ಅನೇಕರಿಗೆ ಪ್ರತ್ಯೇಕವಾದ ಸಭಾಪಂಗಡದ ನಿಷ್ಠೆಯಿರುವದಿಲ್ಲ ಮತ್ತು ತಮ್ಮ ಧಾರ್ಮಿಕ ನಿಷ್ಠೆಯನ್ನು ಸುಲಭವಾಗಿ ಬದಲಾಯಿಸುತ್ತಾರೆ. ಯಾವ ಆಧಾರದ ಮೇಲೆ ನೀವು ಇನ್ನೊಂದು ಸಭೆಯನ್ನು ಆಯ್ದುಕೊಳ್ಳುವಿರಿ?

ಒಂದು ಸಭಾಪಂಗಡದಿಂದ ಇನ್ನೊಂದಕ್ಕೆ ಬದಾಲಾಯಿಸುವದರಲ್ಲಿ ಯಾವ ದೊಡ್ಡ ಸದ್ಗುಣವೂ ಇರುವದಿಲ್ಲವೆಂದು ನಾವು ಸೂಚಿಸುತ್ತೇವೆ. ಬದಲಾಯಿಸುವದನ್ನು ನೀವು ಯೋಚಿಸುವ ಅಗತ್ಯತೆಯಿದ್ದರೆ, ಯಾವುದು ಸರಿಯಾಗಿದೆ ಎಂಬುದರ ಮೇಲೆ ಮತ್ತು: ನಾನು ಏನು ಮಾಡಬೇಕೆಂದು ಕರ್ತನು ಬಯಸುತ್ತಾನೆ? ಅನೇಕ ಸಭೆಗ ಳಲ್ಲಿ ಯಾವುದು ಆತನ ಸಭೆಯಾಗಿರುತ್ತದೆ? ಎಂದು ಕೇಳಿ ಮಾಡಿರಿ. "ನಿನ್ನ ಆಯ್ಕೆಯ ಸಭೆಯಲ್ಲಿ ಭಾಗವಹಿಸ ಬೇಡ." ಕ್ರಿಸ್ತನ ಆಯ್ಕೆಯ ಸಭೆಯನ್ನು ಆಯ್ದುಕೋ.

ಕ್ರಿಸ್ತನ ಸಭೆಗಾಗಿ, ಹೊಸ ಒಡಂಬಡಿಕೆಯಲ್ಲಿ ನೀವು ಓದುವ ಸಭೆಗಾಗಿ ನಾವು ಚಿನ್ನವಿಸುತ್ತಿದ್ದೇವೆ. ಪೂರ್ವಾಭಿಪ್ರಾಯವಿಲ್ಲದ ವ್ಯಕ್ತಿಯು ನಿನ್ನಲ್ಲಿ ಯಾಕೆ ತಪ್ಪನ್ನು ಕಂಡುಕೊಳ್ಳಬೇಕು? ಆ ಚಿನ್ನಹಕ್ಕೆ ನೀನು ಯಾಕೆ ಉತ್ತರ ಕೊಡಬಾರದು?

---

ಟಿಪ್ಪಣೆಗಳು

[1]*The World Book Dictionary,* 1967 ed., s.v. "denomination." [2]*Pocket Oxford Dictionary,* s.v. "denomination." [3]James C. Fernald, *Synonyms, Antonyms, and Prepositions* (New York: Funk and Wagnalls Co., 1947), 93.m [4]*Use The Right Word* (Pleasantville, N.Y.: Reader's Digest Association, 1969), 149.



© 2009 Truth for Today